# ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ

**ಸಿ.ಸಿ.ನಂಃ 565/2023**

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

**:ವಿರುದ್ಧ:**

**ಆರೋಪಿಃ** ಶ್ರೀ ಅಣ್ಣಪ್ಪ.ಹೆಚ್.
ಬಿನ್ ಹನುಮಂತಪ್ಪ,
30 ವರ್ಷ,
ವಾಸ ಅತ್ತಿಘಟ್ಟೆ
ಶಿವನಿ ಹೋಬಳಿ,
ಅಜ್ಜಂಪುರ ತಾಲ್ಲೂಕು.

## ದೋಷಾರೋಪಣೆ

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 18.01.2023 ರಂದು ಬೆಳಗಿನ ಜಾವ 4.00 ಗಂಟೆಗೆ ಅಜ್ಜಂಪುರ ಪೊಲೀಸ್ ಠಾಣಾ ಸರಹದ್ದಿನ ಕೆಂಚಾಪುರ ಗ್ರಾಮದಲ್ಲಿ ಚಾಸಾ-1/ ಶ್ರೀ ಬಸವರಾಜ್ ರವರ ತಂದೆ ಚಾಸಾ-2/ ಶ್ರೀ ನಾಗರಾಜ್.ಕೆ.ಎಸ್ ರವರ ಹೆಸರಿನಲ್ಲಿರುವ ಸರ್ವೆನಂಬರ್ 62/1 ರ 1.01 ಎಕರೆ ಜಮೀನಿನಲ್ಲಿರುವ ಅಡಿಕೆ ಶೆಡ್ ಮುಂದಿನ ಅಡಿಕೆ ಕಣದಲ್ಲಿ ಚಾಸಾ-1 ರವರ ಬಾಬ್ತು ಸುಲಿದು ಬಣ್ಣಕಟ್ಟಿ ಬೇಯಿಸಿ ಒಳಗಲು ಹಾಕಿದ್ದ ಸುಮಾರು 25,000/- ಬೆಲೆಯ ಸುಮಾರು 55 ಕೆಜಿ ತೂಕದ ಒಳಗಿದ ರಾಶಿ ಅಡಿಕೆಯನ್ನು ಆರೋಪಿಯಾದ ನೀವು ಕಳ್ಳತನ ಮಾಡಿಕೊಂಡು ಹೋಗಿರುತ್ತೀರಿ. ಆ ರೀತ್ಯ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 379 ರಂತೆ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಸದರಿ ಮೇಲ್ಕಂಡ ಆರೋಪಿಯಾದ ನೀವು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮೇಲೆ ಹೇಳಿದ ಅಪರಾದವನ್ನು ಮಾಡಿದ್ದರಿಂದ, ಅದು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದೆಂದು ಆದೇಶಿಸಲಾಗಿದೆ.

ಪ್ರಶ್ನೆ-1ಃ ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದಿರಾ? ಅವುಗಳು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ Yes

ಪ್ರಶ್ನೆ-2ಃ ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ Pleaded not guilty

(ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು )

ದಿನಾಂಕ: 16.11.2024

ಸಹಿ/-

**(ರಾಹುಲ್ ಶೆಟ್ಟಿಗಾರ್)**
**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ**
**ಪ್ರ.ದ.ನ್ಯಾದಂ., ಶೃಂಗೇರಿ.**

**ಆರೋಪಿ ಸಹಿಃ**